ಸೇಷನ್ ಕೇಸ್ ನಂಃ 237/2022

ಪಿ. ಡಬ್ಲೂಃ 5

ಸಿ.ಡಬ್ಲೂಃ 10

**ದಿನಾಂಕಃ 22.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1, 2, 5, 20 ಮತ್ತು 21 ನೇ ಆರೋಪಿತರ ಪರ ಶ್ರೀ. ಪಿ.ಎಸ್.ಎ. ವಕೀಲರಿಂದಃ**

(ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ ಹಾಗೂ ಸದರಿಯವರಿಗೆ ಮರಾಠಿ ಮಾತ್ರ ಬರುವ ಕಾರಣ ಕನ್ನಡ ಭಾಷೆಯಲ್ಲಿ ಆರೋಪಿ ಪರ ವಕೀಲರು ಕೇಳಿದ ಪ್ರಶ್ನೆಗಳನ್ನು ಮರಾಠಿ ಭಾಷೆಗೆ ಭಾಷಾಂತರಿಸಿ ಈ ಸಾಕ್ಷಿಗೆ ಹೇಳಿ, ಈ ಸಾಕ್ಷಿಯು ಮರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಕನ್ನಡಕ್ಕೆ ಭಾಷಾಂತರಿಸಲು ಶ್ರೀ. ಟಿ.ಎ.ಕೆ. ವಕೀಲರನ್ನು ಭಾಷಾ ತರ್ಜುಮೆಗಾರರನ್ನಾಗಿ ನೇಮಕ ಮಾಡಿಕೊಳ್ಳಲಾಯಿತು).

28. ಆರ್ಟಿಲರಿ ಎಂದರೆ ನನಗೆ ಆಯುಧಗಳನ್ನು ಹೇಗೆ ಬಳಸುವುದು ಮತ್ತು ಅದನ್ನು ಹೇಗೆ ಉಪಯೋಗಿಸುವುದು ಎಂದು ತರಬೇತಿ ನೀಡುತ್ತಾರೆಂದರೆ ಸರಿ. ನನ್ನ ಹೆಂಡತಿ ಅಂಗಡಿಯಿಂದ ಸಭೆಗೆ ಹೋಗಿ ಅರ್ಧ ಗಂಟೆ ಬಿಟ್ಟು ಘಟನಾ ಸ್ಥಳಕ್ಕೆ ಬಂದರು. ಮಹಿಳಾ ಮಂಡಳದ ಮಹಿಳೆಯರು ಘಟನಾ ಸ್ಥಳಕ್ಕೆ ಬಂದಾಗ ವಾಹನ ಅಂಗಡಿಯ ಮುಂದೆ ಇತ್ತು. ಸದರಿ ವಾಹನವನ್ನು ದಕ್ಷಿಣಕ್ಕೆ ಮುಖ ಮಾಡಿ ನಿಲ್ಲಿಸಲಾಗಿತ್ತು. ಶಿವಾಜಿ ಗಲ್ಲಿ ಪೂರ್ವ-ಪಶ್ಚಿಮದ ರಸ್ತೆ ಎಂದರೆ ಸರಿ. ಆ ಗಲ್ಲಿಯಲ್ಲಿರುವ ಎಲ್ಲಾ ಜನರು ತಮ್ಮ ವಾಹನವನ್ನು ಪೂರ್ವ-ಪಶ್ಚಿಮವಾಗಿ ನಿಲ್ಲಿಸುತ್ತಾರೆಂದರೆ ಸರಿ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಅರ್ನವ ಕುಟ್ರೆರವರ ವಾಹನದ ಸಂಖ್ಯೆ ಹೇಳಿರುತ್ತೇನೆ. ಪೋಲೀಸರು ಘಟನಾ ಸ್ಥಳಕ್ಕೆ ಬಂದಾಗ ಸದರಿ ವಾಹನ ಘಟನಾ ಸ್ಥಳದಲ್ಲಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಶಿವಾಜಿ ಗಲ್ಲಿಯ ರಸ್ತೆ 20 ರಿಂದ 22 ಅಡಿ ಅಗಲ ಇದೆ. ಅದು ಕಾಂಕ್ರಿಟ್ ರಸ್ತೆ ಎಂದರೆ ಸರಿ. ಕಾಂಕ್ರಿಟ್ ರಸ್ತೆಯಲ್ಲಿ ಮಣ್ಣು ಅಥವಾ ಯಾವುದೇ ದ್ರವ್ಯ ಬಿದ್ದರೆ ಅದು ಹರಿದು ಹೋಗುವುದಿಲ್ಲ ಎಂದರೆ ಸರಿ. ಸದರಿ ಶಿವಾಜಿ ಗಲ್ಲಿಯ ರಸ್ತೆಯ ಎರಡು ಬದಿಯಲ್ಲಿ ಗಟರ್ ಗಳು ಇರುವುದಿಲ್ಲ. ರಸ್ತೆಯ ಎರಡು ಬದಿಯಲ್ಲಿ ಗಟರ ಇರದ ಕಾರಣ ದ್ರವ್ಯ ಎಲ್ಲಿಯೂ ಹರಿದು ಹೋಗುವುದಿಲ್ಲ ಪಕ್ಕಕ್ಕೆ ಬಂದು ನಿಲ್ಲುತ್ತದೆ ಎಂದರೆ

ಸರಿಯಲ್ಲ. ಸದರಿ ರಸ್ತೆ ಉತ್ತರ ದಿಕ್ಕಿನಲ್ಲಿ ಇಳಿಜಾರು ಇದೆ. ಘಟನೆ ಆಗಿದೆ ಎಂದು ಹೇಳುವ ಸ್ಥಳದ ಉತ್ತರ ದಿಕ್ಕಿಗೆ ದೇವಸ್ಥಾನ ಇದೆ ಎಂದರೆ ಸರಿ. ಮಂದಿರದ ಪಕ್ಕದಲ್ಲಿ ಕಾಂಕ್ರಿಟ್ ರಸ್ತೆಗೆ ಹತ್ತಿ ಕಟ್ಟೆ ಇದೆ ಎಂದರೆ ಸರಿ. ದೇವಸ್ಥಾನದ ಮುಂದೆ ದೀಪ ಸ್ತಂಭ ಇದೆ ಎಂದರೆ ಸಾಕ್ಷಿಯು ರಸ್ತೆಯ ದಕ್ಷಿಣ ಬದಿಗೆ ಇದೆ ಎಂದು ಹೇಳುತ್ತಾರೆ. ನಮ್ಮ ಗೌಂಡವಾಡದಲ್ಲಿ ಯಾವುದೇ ವಾಹನವಿದ್ದರೂ ದೀಪ ಸ್ತಂಭದ ಹಾಗೂ ದೇವಸ್ಥಾನದ ಮಧ್ಯೆ ಹಾಯ್ದು ಹೋಗುವುದಿಲ್ಲ ಎಂದರೆ ಸರಿ. ನಮ್ಮ ಅಂಗಡಿಯ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಯಾವುದೇ ಎತ್ತಿನ ಗಾಡಿ ಅಥವಾ ದ್ವಿಚಕ್ರ ವಾಹನ ಹಚ್ಚಿದರೂ ಸಹ ಅಲ್ಲಿ ಬೇರೆ ವಾಹನ ಹೋಗಲು ಬರುವುದಿಲ್ಲ ಎಂದರೆ ಸರಿ. 2 ನೇ ಆರೋಪಿ ತನ್ನ ವಾಹನವನ್ನು ನನ್ನ ಅಂಗಡಿಯ ಮುಂದೆ ನಿಲ್ಲಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವನ ಹೆಸರಿನಲ್ಲಿ ಯಾವುದೇ ವಾಹನ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಅಂಗಡಿಯ ಮುಂದೆ ತನ್ನ ವಾಹನವನ್ನು ಯಾವತ್ತೂ ನಿಲ್ಲಿಸಿಯೇ ಇಲ್ಲ ಆದ್ದರಿಂದ ನಮ್ಮಿಬ್ಬರ ಮಧ್ಯೆ ಯಾವತ್ತೂ ಜಗಳವಾಗಿಲ್ಲ ಎಂದರೆ ಸರಿಯಲ್ಲ.

29. ಸತೀಶ ರಕ್ತದ ಮಡುವಿನಲ್ಲಿ ಬಿದ್ದ ನಂತರ ಅವನನ್ನು ನಾನು ಮತ್ತು ಉಮೇಶ ಪಾಟೀಲ ಹಿಡಿದುಕೊಂಡಿದ್ದು ಅವನು ತಾನಾಗಿಯೇ ನಮ್ಮ ಸಹಾಯದಿಂದ ವಾಹನದಲ್ಲಿ ಕುಳಿತುಕೊಂಡಿರುತ್ತಾನೆ. ನಾನು ಮತ್ತು ಉಮೇಶ ಅವನನ್ನು ಎತ್ತಿ ವಾಹನದಲ್ಲಿ ಕುಳಿತುಕೊಳ್ಳಲು ಸಹಾಯ ಮಾಡಿರುತ್ತೇವೆ. ನಾನು ಸತೀಶ ಪಾಟೀಲ ಇವರನ್ನು ವಾಹನದಲ್ಲಿ ಕೂರಿಸುವ ಸಂದರ್ಭದಲ್ಲಿ ನನ್ನ ಬಟ್ಟೆಗೆ ಯಾವುದೇ ರಕ್ತ ಹತ್ತಿರುವುದಿಲ್ಲ, ನನ್ನ ಕೈಗೆ ಮಾತ್ರ ಹತ್ತಿತ್ತು. ರಕ್ತದ ಮಡುವಿನಲ್ಲಿ ಬಿದ್ದವರನ್ನು ಎತ್ತಿ ವಾಹನಕ್ಕೆ ಕೂರಿಸುವಾಗ ಸಾಮಾನ್ಯವಾಗಿ ಎತ್ತಿದವರ ಬಟ್ಟೆಗೆ ರಕ್ತ ಹತ್ತುತ್ತದೆ ಎಂದರೆ ಸಾಕ್ಷಿಯು ಆಗಬಹುದು ಎಂದು ಹೇಳುತ್ತಾರೆ. ರಕ್ತ ಯಾವ ದಿಕ್ಕಿಗೆ ಹರಿದು ಹೋಗುತ್ತಿತ್ತು ಎಂದು ನಾನು ನೋಡಿರುವುದಿಲ್ಲ. ಉಮೇಶ ಪಾಟೀಲ ರವರಿಗೂ ರಕ್ತ ಹತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಸತೀಶನನ್ನು ಕರೆದುಕೊಂಡು ಹೋದ ವಾಹನದಲ್ಲಿ ರಕ್ತ ಬಿದ್ದಿತ್ತು. ನಾನು ಆಸ್ಪತ್ರೆಯಲ್ಲಿ ಕೈ ತೊಳೆದುಕೊಂಡಿರುತ್ತೇನೆ. ನನ್ನ ಕೈಗೆ ರಕ್ತ ಹತ್ತಿದ 15-20 ನಿಮಿಷದ ನಂತರ ಕೈ ತೊಳೆದುಕೊಂಡಿರುತ್ತೇನೆ. ಅಲ್ಲಿ ಯಾವುದೇ ಘಟನೆ ನಡೆಯದಿದ್ದ ಕಾರಣ ನನ್ನ ಬಟ್ಟೆಗೆ ರಕ್ತ ಹತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ

ಘಟನೆ ನಡೆದಿಲ್ಲ, ನಾನು ಮೃತ ಸತೀಶ ಪಾಟೀಲ ರವರನ್ನು ಕೆ.ಎಲ್.ಇ. ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ, ಆದ್ದರಿಂದ ನನ್ನ ಬಟ್ಟೆಗೆ ಯಾವುದೇ ರಕ್ತ ಹತ್ತಿಲ್ಲ ಎಂದರೆ ಸರಿಯಲ್ಲ.

30. ನಾನು ಆಸ್ಪತ್ರೆಗೆ ಹೋದಾಗ 09.50 ಗಂಟೆ ಆಗಿತ್ತು. ನಾನೇ ವೈಧ್ಯರಿಗೆ ಘಟನೆಯ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ವೈಧ್ಯರು ಸಮರಿ ಶೀಟನಲ್ಲಿ ಮಾಹಿತಿ ನೀಡಿದಂತೆ ಸರಿಯಾಗಿ ಬರೆದಿರುತ್ತಾರೆಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಆದರೆ ವೈಧ್ಯರು ಬರೆದಿರುತ್ತಾರೆಂದು ಹೇಳುತ್ತಾರೆ. ಸತೀಶ ಪಾಟೀಲರವರನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೋ ಅವರು ವೈಧ್ಯರಿಗೆ ಸರಿಯಾಗಿ ಮಾಹಿತಿಯನ್ನು ಕೊಟ್ಟಿದ್ದರು ಎಂದರೆ ಸರಿ. ನಾನು ಸತೀಶನ ಶವವನ್ನು ತೆಗೆದುಕೊಂಡೆ ದಿಃ 19.06.2018 ರಂದು ಮನೆಗೆ ಸಂಜೆ 07.00 ಗಂಟೆಗೆ ಹೋಗಿರುತ್ತೇನೆ. ನಾನು ಶವ ಪಂಚನಾಮೆ ಹಾಗೂ ಮರಣೋತ್ತರ ಪರೀಕ್ಷೆ ಆಗುವವರೆಗೂ ಆಸ್ಪತ್ರೆಯಲ್ಲೇ ಇದ್ದೆ ಎಂದರೆ ಸರಿ. ನನ್ನ ಜೊತೆ ಆಸ್ಪತ್ರೆಯಲ್ಲಿ ಸೋನಮ ಪಾಟೀಲ, ಗಂಗಾರಾಮ, ಲಖನ್ ಪಾಟೀಲ, ಉಮೇಶ ಪಾಟೀಲ, ಮತ್ತೇ ಊರಿನ ಜನ ಇದ್ದರು. ಆ ಸಮಯದಲ್ಲಿ ಪೂಜಾ ದೂರನ್ನು ಕೊಟ್ಟಿರುತ್ತಾರೆಂದು ಅವರನ್ನು ಕೇಳಿಯಾಗಲಿ, ಬೇರೆಯವರನ್ನು ಕೇಳಿ ನಾನು ತಿಳಿದುಕೊಂಡಿರುವುದಿಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ, ಘಟನೆ ನನ್ನ ಸಮಕ್ಷಮ ನಡೆದಿಲ್ಲ ಆದ್ದರಿಂದ ನಾನು ಯಾರನ್ನೂ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ರಾತ್ರಿ ಒಂದಿಬ್ಬರು ಪೋಲೀಸರು ಆಸ್ಪತ್ರೆಗೆ ಬಂದಿದ್ದರು. ನನಗೆ ಪೋಲೀಸರು ವಿಚಾರಿಸಿಲ್ಲ. ನಾನು ಖುದ್ದಾಗಿ ಪೋಲೀಸರಿಗೆ ಘಟನೆಯ ಬಗ್ಗೆಯಾಗಲಿ, ಸತೀಶ ಪಾಟೀಲ ರವರನ್ನು ಹೊಡೆದವರ ಬಗ್ಗೆಯಾಗಲಿ ಹೇಳಿರುವುದಿಲ್ಲ. ಮಾರನೇಯ ದಿನ ಪೋಲೀಸರು ನನಗೆ ಬೆಳಗ್ಗೆ 08.30/09.00 ಗಂಟೆಗೆ ಭೇಟಿಯಾಗಿರುತ್ತಾರೆ. ಪೋಲೀಸರು ನನಗೆ ದೂರವಾಣಿ ಕರೆ ಮಾಡಿ ಆಸ್ಪತ್ರೆಗೆ ಬರುತ್ತಿದ್ದ ಬಗ್ಗೆ ಹೇಳಿರುವುದಿಲ್ಲ. 3-4 ಜನ ಆಸ್ಪತ್ರೆಗೆ ಬಂದಿದ್ದರು. ಅದರಲ್ಲಿ ಗುರುನಾಥರವರು ಒಬ್ಬರು ಇದ್ದರು. ಸದರಿ ಗುರುನಾಥರವರು ನನಗೆ ಸತೀಶರವರದು ಈ ರೀತಿ ಘಟನೆ ನಡೆದಿದೆ ಪಂಚನಾಮೆ ಮಾಡಬೇಕು ನೀವು ನನ್ನ ಜೊತೆ ಬನ್ನಿ ಎಂದು ಹೇಳಿದರು. ಗುರುನಾಥರವರು ನನಗೆ ಈ ರೀತಿ ಪ್ರಕರಣ ದಾಖಲಾಗಿದೆ ಎಂದು ಹೇಳಿದರು. ಗುರುನಾಥರವರು ನನಗೆ ತುರ್ತು ಚಿಕಿತ್ಸಾ ವಿಭಾಗದ ಹತ್ತಿರ ಭೇಟಿಯಾದರು. ನಂತರ ಅವರು ನನ್ನನ್ನು ಶವಾಗಾರಕ್ಕೆ ಕರೆದುಕೊಂಡು ಹೋದರು. ಪೋಲೀಸರ ಜೊತೆ ಒಬ್ಬ

ಛಾಯಾಚಿತ್ರಗ್ರಾಹಕರು, ಇಬ್ಬರು ಪಂಚರು ಇದ್ದರು. ಶವಪಂಚನಾಮೆಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನಗೆ ಪಂಚನಾಮೆಯ ಸಮಯದಲ್ಲಿ ಪೋಲೀಸರು ಪ್ರಶ್ನೆಗಳನ್ನು ಕೇಳಿರುತ್ತಾರೆ. ನಾನು ಸದರಿ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿರುತ್ತೇನೆ. ನಾನು ಉತ್ತರಿಸಿರುವುದನ್ನೇ ಸರಿಯಾಗಿ ಬರೆದುಕೊಂಡಿರುತ್ತಾರೆ.

31. ಸತೀಶನ ಮೃತ ದೇಹವನ್ನು ಮಧ್ಯಾಹ್ನ 03.00 ಗಂಟೆಗೆ ನನಗೆ ಹಸ್ತಾಂತರಿಸಿದ್ದರು. ಮರಣೋತ್ತರ ಪರೀಕ್ಷೆಯನ್ನು ಬೆಳಗ್ಗೆ 11.00 ಗಂಟೆಯ ನಂತರ ಮಾಡಿದರು. ಮರಣೋತ್ತರ ಪರೀಕ್ಷೆಯಾದ ನಂತರ ಮಧ್ಯಾಹ್ನ 03.00 ಗಂಟೆಯ ನಂತರ ನನಗೆ ಮೃತ ದೇಹವನ್ನು ಕೊಟ್ಟಿರುತ್ತಾರೆ. ಸತೀಶ ರವರ ಅಂತ್ಯಸಂಸ್ಕಾರ ಒಂದರಿಂದ ಒಂದುವರೆ ಗಂಟೆ ಆಯಿತು. ದಿಃ 19.06.2018 ರಂದು ಗುರುನಾಥ ರವರು ಹಾಗೂ ಉಳಿದ ಪೋಲೀಸರು ನನ್ನ ಜೊತೆ ಆಸ್ಪತ್ರೆಯಲ್ಲಿದ್ದರು ಎಂದರೆ ಸರಿ. ಆರೋಪಿತರು ಯಾವುದೇ ಕೃತ್ಯ ಎಸಗದಿದ್ದರೂ ಸದರಿಯವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ. 1 ರಿಂದ 3 ಕ್ಕೂ 1, 3 ಮತ್ತು 4 ನೇ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಲ್ಲೋ ಯಾರೋ ಮಾಡಿದ ಕೃತ್ಯವನ್ನು ಆರೋಪಿತರು ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ನನಗೆ ಮಾಹಿತಿ ನೀಡಿದಂತೆ ನಾನು ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನನಗೆ ಪೋಲೀಸರು ಕಲಂ 164 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಹೇಳಿಕೆಯನ್ನು ಕೊಡಲು ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗುವ ಮುನ್ನ ನೋಟೀಸನ್ನು ಕೊಟ್ಟಿರುತ್ತಾರೆ. ಸದರಿ ನೋಟೀಸಿನಲ್ಲಿ ಯಾವ ನ್ಯಾಯಾಲಯಕ್ಕೆ ಹೋಗಬೇಕಾಗಿತ್ತು ಎಂದು ನಿಮಗೆ ಹೇಳಿದ್ದರೋ ಎಂದರೆ ಸಾಕ್ಷಿ 2 ನೇ ಜಿಲ್ಲಾ ನ್ಯಾಯಾಲಯಕ್ಕೆ ಹೋಗಬೇಕು ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಾನು ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಸುಳ್ಳು ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 3, 4, 7, 8, 10, 11 ಮತ್ತು 15 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದಃ**

32. ನಾನು ಗೌಂಡವಾಡದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನಾನು ಅಲ್ಲೇ ಹುಟ್ಟಿ ಬೆಳೆದ ಕಾರಣ ಊರಿನಲ್ಲಿ ವಾಸಿಸುವ ಎಲ್ಲಾ ಜನರ ಹೆಸರು ನನಗೆ ಗೊತ್ತಿದೆ. ನಾನು ನಡೆಸುತ್ತಿದ್ದ ಕಿರಾಣಿ ಅಂಗಡಿಯ ಅಕ್ಕಪಕ್ಕದಲ್ಲಿ ಎಲ್ಲಾ ವಾಸದ ಮನೆಗಳು ಇವೆ ಎಂದರೆ ಸರಿ. ನಮ್ಮ ಕಿರಾಣಿ ಅಂಗಡಿಯಲ್ಲಿ ಧಾನ್ಯಗಳನ್ನು ಸಹ ಮಾರುತ್ತೇವೆ. ನನ್ನ ಅಂಗಡಿಯ ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದು ಪ್ರತಿನಿತ್ಯ ಬಹಳಷ್ಟು ಜನ ನನ್ನ ಅಂಗಡಿಗೆ ಬಂದು ಹೋಗಿ ಮಾಡುತ್ತಾರೆ. ನಮ್ಮ ವಾಸದ ಮನೆಯಿಂದ ನನ್ನ ಕಿರಾಣಿ ಅಂಗಡಿ 500-600 ಅಡಿ ಅಂತರದಲ್ಲಿದೆ. ನಮ್ಮ ವಾಸದ ಮನೆಯಿಂದ ಅಂಗಡಿಯವರೆಗಿನ ರಸ್ತೆಯ ಅಕ್ಕಪಕ್ಕದಲ್ಲಿ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳಲ್ಲಿ ಕೃಷಿ ಮಾಡುವವರ ಮನೆ ಇದ್ದು, ಗಂಡ,ಹೆಂಡತಿ, ಮಕ್ಕಳು ವಾಸಿಸುತ್ತಾರೆ ಹಾಗೂ ದನ-ಕರಗಳನ್ನು ಕಟ್ಟಿರುತ್ತಾರೆಂದರೆ ಸರಿ.

33. ನಾನು 30 ವರ್ಷ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದು, ಸದರಿ ಅವಧಿಯಲ್ಲಿ 10 ಊರುಗಳಲ್ಲಿ ಸೇವೆ ಸಲ್ಲಿಸಿರುತ್ತೇನೆ. ನನ್ನ ಸೇವೆಯಲ್ಲಿ ನನಗೆ ಮೊದಲ ಬಾರಿ ಬಡ್ತಿ ನಾನು ಸೇವೆಗೆ ಸೇರಿದ 7-8 ವರ್ಷಗಳ ನಂತರ ಸಿಕ್ಕಿರುತ್ತದೆ. ನಾನು ನಿವೃತ್ತಿ ಹೊಂದುವಾಗ ಸುಬೇದಾರ ಹಾನ್ಸರಿ ಲೆಪ್ಟಿನೆಂಟ್ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ನಿವೃತ್ತಿ ಹೊಂದಿದ ನಂತರ ರೈಲ್ವೆ ಪೋಲೀಸ್ ಎಂದು ಕರ್ತವ್ಯ ನಿರ್ವಹಿಸಲು ಅರ್ಜಿಯನ್ನು ಕೊಟ್ಟಿದ್ದೆ, ಆದರೆ ಸದರಿ ಅರ್ಜಿಯನ್ನು ನನಗೆ ವಯಸ್ಸು ಜಾಸ್ತಿಯಾದ ಕಾರಣ ಪರಿಗಣಿಸಿರುವುದಿಲ್ಲ. ನಾನು ಅಂಗಡಿಯನ್ನು ಬಿಟ್ಟು ಬೇರೆ ಯಾವುದೇ ವ್ಯಾಪಾರವನ್ನು ಮಾಡುವುದಿಲ್ಲ. ನಮ್ಮ ಗೌಂಡವಾಡದಲ್ಲಿ ಯಾರು ವೈದ್ಯರು ಇಲ್ಲ. ನಮ್ಮ ಗೌಂಡವಾಡದಲ್ಲಿ 4-5 ಕಿರಾಣಿ ಅಂಗಡಿಗಳು ಇವೆ.

34. ನಾನು ಅರ್ನವನಿಗೆ ತನ್ನ ವಾಹನವನ್ನು ನನ್ನ ಅಂಗಡಿಯ ಮುಂದೆ ಈಗ ಹಚ್ಚಬೇಡ ಅಂಗಡಿಯನ್ನು ಮುಚ್ಚಿದ ಮೇಲೆ ಹಚ್ಚು ಎಂದು ಹೇಳುವಾಗ ನನ್ನನ್ನು ಹಾಗೂ 2 ನೇ ಆರೋಪಿ ಅರ್ನವನನ್ನು ಬಿಟ್ಟು ಅಲ್ಲಿ ಕೇವಲ ಇಬ್ಬರು ಸಣ್ಣ ಮಕ್ಕಳು ಮಾತ್ರ ಇದ್ದರು. 2 ನೇ ಆರೋಪಿ ಅರ್ನವರವರ ಮನೆ ಮೃತ ಸತೀಶ ರವರ ಮನೆಯ ಪಕ್ಕದಲ್ಲಿ ಇದೆ ಎಂದರೆ ಸಾಕ್ಷಿಯು 2 ಮನೆ ಬಿಟ್ಟು ಇದೆ ಎಂದು ಹೇಳುತ್ತಾರೆ. ಮೃತ ಸತೀಶ ನನ್ನ ಮುಂದೆ ಹುಟ್ಟಿ ಬೆಳೆದವನು ಎಂದರೆ ಸರಿ. ಮೃತ ಸತೀಶ ನನ್ನ ಅಂಗಡಿಗೆ ಪ್ರತಿನಿತ್ಯ ಬರುತ್ತಿರಲಿಲ್ಲ, ಯಾವಾಗ ಅವಶ್ಯಕತೆ ಇರುತ್ತಿತ್ತೋ ಅವಾಗ

ಮಾತ್ರ ಬರುತ್ತಿದ್ದ. ನನ್ನ ವಿದ್ಯಾಭ್ಯಾಸ ಮರಾಠಿಯಲ್ಲಿ ಆಗಿದೆ. ನಾನು ನಿವೃತ್ತಿ ಹೊಂದುವಾಗ ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತಿತ್ತು. ನನಗೆ ಸೈನ್ಯದಲ್ಲಿದ್ದಾಗ ಕಮಾಂಡಿಗ್ ಆಫೀಸರ್ ಮುಂದೆ ಹಾಜರಾಗುವ ಸಂದರ್ಭ ಬಂದಿರುವುದಿಲ್ಲ ಆದರೆ ಜುನಿಯರ್ ಕಮಾಂಡಿಗ್ ಆಫೀಸರ್ ಮುಂದೆ ಹಾಜರಾಗಿರುತ್ತೇನೆ.

35. ಘಟನೆಯಾಗಿದೆ ಎಂದು ಹೇಳುವ ದಿನ ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನನ್ನ ಹೆಂಡತಿಯು ಹೋಗಿಲ್ಲ. ಮೃತ ಸತೀಶ ರವರ ತಂದೆಯು ಸಹ ಹೋಗಿರುವುದಿಲ್ಲ. ನನಗೆ ದ್ವಿಚಕ್ರ ವಾಹನವನ್ನು ಚಲಾಯಿಸಲು ಬರುತ್ತದೆ. ನನಗೆ ಘಟನೆ ನನ್ನ ಅಂಗಡಿಯ ಮುಂದೆ ಆಗಿರುವ ಕಾರಣ ಪೋಲೀಸರಿಗೆ ಹೋಗಿ ಸದರಿ ಘಟನೆಯ ಬಗ್ಗೆ ಮಾಹಿತಿ ನೀಡಬೇಕು ಎಂದು ಸತೀಶರವರು ಮೃತರಾಗಿರುತ್ತಾರೆಂದು ವೈದ್ಯರು ಹೇಳಿದ ನಂತರವೂ ಅನಿಸಿರುವುದಿಲ್ಲ. ನಾನು ಘಟನೆಯಾದ ಬಗ್ಗೆ ಪೋಲೀಸರಿಗೆ ಹೇಳಿ ಎಂದು ಊರಿನಲ್ಲಿರುವ ಯಾರಿಗೂ ನಾನು ಹೇಳಿರುವುದಿಲ್ಲ. ನಾನು ಪೋಲೀಸರಿಗೆ ದೂರನ್ನು ಸಲ್ಲಿಸಲು ಸತೀಶರವರ ಹೆಂಡತಿ ಪ್ರಾಸಾಃ 1 ಪೂಜಾಳಿಗೆ ಹಾಗೂ ಅವಳ ಜೊತೆ ಇದ್ದ ಒಬ್ಬ ಪುರುಷನಿಗೆ ಹೇಳಿ ಕಳುಹಿಸಿರುತ್ತೇನೆ. ಸದರಿ ಪೂಜಾಳ ಜೊತೆ ಹೋದ ಆ ವ್ಯಕ್ತಿಯ ಹೆಸರು ನನಗೆ ನೆನಪಿಲ್ಲ. ನಮ್ಮ ಅಣ್ಣ ರಾಜೇಂದ್ರನ ಮಗಳ ಗಂಡನನ್ನು ಪೂಜಾಳ ಜೊತೆಗೆ ಕಳುಹಿಸಿದ್ದೇನು. ಸದರಿಯವರು ಕೊಲ್ಲಾಪೂರದಲ್ಲಿ ವಾಸವಾಗಿರುತ್ತಾರೆ. ಸದರಿಯವರ ಮಕ್ಕಳು ಕಾಲೇಜಿಗೆ ಹೋಗುತ್ತಾರೆ. ರಾಜೇಂದ್ರನ ಮಗಳು ಮತ್ತು ಅಳಿಯ ನಮ್ಮ ಅಣ್ಣ ರಾಜೇಂದ್ರನ ಮನೆಗೆ ಬಂದು ಹೋಗಿ ಮಾಡುತ್ತಾರೆ. ಆ ಸಮಯದಲ್ಲಿ ನಾನು ಅವರ ಮನೆಗೆ ಹೋಗುತ್ತಿದ್ದೆ. ಸದರಿಯವರು ಪೋಲೀಸ್ ಠಾಣೆಗೆ ಹೋಗಿ ಬಂದು ನನಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಸದರಿಯವರು ನನಗೆ ಪೋಲೀಸ್ ಠಾಣೆಗೆ ದೂರು ಕೊಡಲು ಹೋಗಿ ಬಂದ ಮಾರನೇ ದಿನ ಭೇಟಿಯಾಗಿರುತ್ತಾರೆ. ಸದರಿಯವರು ಮಾರನೇ ದಿನವೂ ನನಗೆ ಭೇಟಿ ಮಾಡಿದಾಗ ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟ ಬಗ್ಗೆ ಹೇಳಿರುವುದಿಲ್ಲ. ನಾನು ಸಹ ನನ್ನ ಅಣ್ಣನ ಅಳಿಯನನ್ನು ದೂರು ನೀಡಿದ ಬಗ್ಗೆ ವಿಚಾರಿಸಿಲ್ಲ. ನಾನು ನನ್ನ ಅಣ್ಣನ ಅಳಿಯನನ್ನು ಪೂಜಾಳ ಜೊತೆಗೆ ದೂರು ನೀಡಲು ಪೋಲೀಸ್ ಠಾಣೆಗೆ ಕಳುಹಿಸಿದ್ದೆ ಎಂಬ ವಿಷಯನ್ನು ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಾಗಲಿ ಹಾಗೂ ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಾಗಲಿ

ಹೇಳಿರಬಹುದು. ನನ್ನ ಹೇಳಿಕೆಯನ್ನು ತೆಗೆದುಕೊಂಡ ನಂತರ ನನಗೆ ಪೋಲೀಸರು ಹಾಗೂ ನ್ಯಾಯಾಧೀಶರು ಓದಿ ಹೇಳಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದಾಗ ಅದನ್ನು ಓದಿ ತಿಳಿದುಕೊಂಡೆ ಸಹಿ ಮಾಡಿರುತ್ತೇನೆ. ನಾನು ನನ್ನ ಅಣ್ಣನ ಅಳಿಯನನ್ನು ಪೋಲೀಸ್ ಠಾಣೆಗೆ ಕಳುಹಿಸಿದ ಬಗ್ಗೆ ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ಹೇಳುತ್ತಿದ್ದೇನೆಂದರೆ ಸರಿ. ದೇವಸ್ಥಾನಕ್ಕೆ ಸಂಬಂಧಿಸಿದ ಯಾವುದೇ ಪ್ರಕರಣಗಳಲ್ಲಿ ನಾನು ಪಕ್ಷಗಾರನಿಲ್ಲ ಎಂದರೆ ಸರಿ. ನಮ್ಮ ಕೌಟುಂಬಿಕ ವಿಷಯಗಳನ್ನೆಲ್ಲಾ ನನ್ನ ಹೆಂಡತಿ ನೋಡಿಕೊಳ್ಳುವುದಿಲ್ಲ, ನಾನೇ ನೋಡಿಕೊಳ್ಳುತ್ತೇನೆ.

36. ನಾನು ದೇವಸ್ಥಾನದ ಜಮೀನಿಗೆ ಸಂಬಂಧಿಸಿದಂತೆ ಇರುವ ಪ್ರಕರಣಗಳಲ್ಲಿ ಮಾಹಿತಿ ನೀಡಲು ವಕೀಲರ ಬಳಿ ನಾನು ಹೋಗಿರುವುದಿಲ್ಲ. ದಿಃ 05.06.1968 ರಲ್ಲಿ ನಾನು ಜನಿಸಿರುತ್ತೇನೆ. 1981 ರಲ್ಲಿ ನಾನು ಶಾಲಾ ವಿದ್ಯಾರ್ಥಿಯಾಗಿದ್ದೆ. 1981 ರಲ್ಲಿ ಪಾಟೀಲ ಮನೆತನದ ಅಣ್ಣ-ತಮ್ಮಂದಿರಿಗೆ ದೇವಸ್ಥಾನದ ಜಮೀನುಗಳನ್ನು ಭೂನ್ಯಾಯ ಮಂಡಳಿ ನೀಡಿರುತ್ತದೆ ಎಂಬ ವಿಷಯ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ಯಾವಾಗಿನಿಂದ ಕಾನೂನು ಬಾಹಿರವಾಗಿ ಕಬ್ಜೆ ತೆಗೆದುಕೊಳ್ಳಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ಕಾನೂನು ಬಾಹಿರವಾಗಿ ಯಾರಿಂದ ಕಬ್ಜೆ ತೆಗೆದುಕೊಂಡಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ.

37. ನನಗಾಗಲಿ, ಸತೀಶನಿಗಾಗಲಿ ಅಥವಾ ನನ್ನ ಅಣ್ಣ ರಾಜೇಂದ್ರನ ಕಡೆಯಿಂದಾಗಲಿ ಕಾನೂನು ಬಾಹಿರವಾಗಿ ದೇವಸ್ಥಾನದ ಜಮೀನನ್ನು ಆರೋಪಿತರು ಕಬ್ಜೆಗೆ ತೆಗೆದುಕೊಂಡಿರುವುದಿಲ್ಲ. ದೇವಸ್ಥಾನದ ಜಮೀನುಗಳನ್ನು ಯಾರು 60-70 ವರ್ಷಗಳಿಂದ ಉಳುಮೆ ಮಾಡುತ್ತಿದ್ದರೋ ಸದರಿಯವರಿಗೆ ಭೂ ನ್ಯಾಯ ಮಂಡಳಿಯಿಂದ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳು ಪಂಚ ಕಮಿಟಿಯವರ ಕಬ್ಜೆಯಲ್ಲಿದ್ದವು. ಪಂಚ ಕಮಿಟಿಯವರು ಜಮೀನುಗಳನ್ನು ಉಳುಮೆ ಮಾಡಲು ಯಾರಿಗೆ ಕೊಟ್ಟಿದ್ದರು ಎಂಬುದು ನನಗೆ ಮಾಹಿತಿ ಇಲ್ಲ. ಜಮೀನುಗಳು ಯಾವತ್ತೂ ಪಂಚ ಕಮಿಟಿಯು ದೇವಸ್ಥಾನದ ಜಮೀನಿನ ಕಬ್ಜೆಯನ್ನು ಯಾವತ್ತೂ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚ ಕಮಿಟಿಯಲ್ಲಿ

ನಾನಾಗಲಿ, ರಾಜೇಂದ್ರ ಪಾಟೀಲ ಆಗಲಿ ಇರಲಿಲ್ಲ ಆದರೆ ನನ್ನ ಚಿಕ್ಕಪ್ಪ ಮೊದಲು ಇದ್ದರು. ದೇವಸ್ಥಾನದ ಜಮೀನು ಯಾರಿಗೆ ಭೂನ್ಯಾಯ ಮಂಡಳಿಯಿಂದ ನೀಡಲಾಗಿದೆಯೋ ಸದರಿ ಪಾಟೀಲ ಮನೆತನದವರು ನಾವು ಸಹೋದರರು ಎಂದರೆ ಸರಿಯಲ್ಲ.

38. ನನಗೆ ಹಾಗೂ ಅರ್ನವನಿಗೆ ಅರ್ನವನ ವಾಹನ ನನ್ನ ಅಂಗಡಿಯ ಮುಂದೆ ನಿಲ್ಲಿಸುವುದಕ್ಕೆ ಸಂಬಂಧಿಸಿದಂತೆ 30 ನಿಮಿಷಕ್ಕಿಂತ ಹೆಚ್ಚು ಸಮಯ ಜಗಳವಾಗಿತ್ತು. ಸದರಿ ಜಗಳದಲ್ಲಿ ಅರ್ನವ ಜೋರಾಗಿ ಕೂಗಾಡುತ್ತಾ ಜಗಳ ಮಾಡುತ್ತಿದ್ದ ನಾನು ಜೋರಾಗಿ ಜಗಳವಾಡುತ್ತಿರಲಿಲ್ಲ. ಘಟನೆ ಆಗಿದೆ ಎಂದು ಹೇಳುವ ಪೂರ್ವದಲ್ಲಿ ನನ್ನ ಹಾಗೂ ಅರ್ನವ ಕುಟ್ರೆ ಅವರ ಮಧ್ಯೆ ಯಾವತ್ತೂ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದಂತೆ ಜಗಳವಾಗಿರುವುದಿಲ್ಲ. ನಾನು ಹಾಗೂ ಅರ್ನವ ಕುಟ್ರೆ ಅನ್ಯೋನ್ಯವಾಗಿದ್ದೇವು. ಘಟನೆಯಾಗಿದೆ ಎಂದು ಹೇಳುವ ದಿನ ಗೌಂಡವಾಡದಲ್ಲಿ ಬೀದಿ ದೀಪಗಳು ಎಲ್ಲಾ ಉರಿಯುತ್ತಿದ್ದವು. ಘಟನೆಯು 45 ನಿಮಿಷಗಳವರೆಗೆ ಆಗಿರುತ್ತದೆ. ಸದರಿ ಘಟನೆ ಆಗಿದೆ ಎಂದು ಹೇಳುವ ಸಮಯದಲ್ಲಿ ನನ್ನ ಅಂಗಡಿಯ ಅಕ್ಕಪಕ್ಕದಲ್ಲಿ ವಾಸಿಸುವ ಜನರು ಹೊರಗೆ ಬಂದಿರುವುದಿಲ್ಲ.

39. ಫ್ರಾಸಾಃ 6 ಸುಮನ, ಚಾಸಾಃ 16 ರೂಪಾ, ಚಾಸಾಃ 15 ರೇಖಾ, ಚಾಸಾಃ 14 ಲೀಲಾ ರವರ ಮನೆ ನಮ್ಮ ಅಂಗಡಿಯ ಅಕ್ಕಪಕ್ಕದಲ್ಲಿ ಇರುವುದಿಲ್ಲ. ಘಟನೆ ಆಗುವ ಸಮಯದಲ್ಲಿ ನಮ್ಮ ಅಂಗಡಿಯಲ್ಲಿ ಗಿರಾಕಿಗಳು ಇದ್ದರೋ ಇಲ್ಲವೋ ನಾನು ನೋಡಿಲ್ಲ. ಮೃತ ಸತೀಶ ನನ್ನ ಅಣ್ಣನ ಮಗನಾಗಿದ್ದು, ಸದರಿಯವರು ಊರಿನಲ್ಲಿ ಎಲ್ಲರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದರು. ನಮ್ಮ ಗೌಂಡವಾಡದಲ್ಲಿ ಸೈನ್ಯದಿಂದ ನಿವೃತ್ತಿ ಹೊಂದಿ ಬಂದವರು, ನನಗೆ ಬೇಕಾದವರು 8-10 ಜನ ಇರುತ್ತಾರೆ. ನಾನು ಮೊಬೈಲ್ ಬಳಸುತ್ತೇನೆ. ನಾನು 20 ವರ್ಷದಿಂದ ಮೊಬೈಲ್ ಬಳಸುತ್ತೇನೆ. ಸದರಿ ಮೊಬೈಲ್ ನಲ್ಲಿ ನನ್ನ ಸಂಬಂಧಿಕರು, ಸ್ನೇಹಿತರು, ಸೈನ್ಯದಲ್ಲಿದ್ದವರ ಮೊಬೈಲ್ ನಂಬರಗಳನ್ನು ಇಟ್ಟುಕೊಂಡಿರುತ್ತೇನೆ. ಘಟನೆಯಾದ ಬಗ್ಗೆ ನಾನು ಯಾರಿಗೂ ತಿಳಿಸಿರುವುದಿಲ್ಲ. ನನ್ನ ಹೆಂಡತಿ ಫ್ರಾಸಾಃ 2 ಸೋನಮ ಪಾಟೀಲ ಸಹ ಮೊಬೈಲ್ ಬಳಸುತ್ತಾರೆ. ನಾನು ನನ್ನ ಹೆಂಡತಿಗಾಗಲಿ, ನನ್ನ ಮನೆಯವರಿಗಾಗಲಿ ಘಟನೆಯಾದ ಬಗ್ಗೆ ಬೇರೆಯವರಿಗೆ ತಿಳಿಸಲು ಹೇಳಿರುವುದಿಲ್ಲ. ಮು.ಮಾ. 1 ರಿಂದ 3 ಚಾಕುಗಳ

ಫೋಟೋಗಳನ್ನು ಪೋಲೀಸರು ನನಗೆ ತೋರಿಸುವ ಮೊದಲು ಸದರಿ ಚಾಕುಗಳು ಹೇಗೆ ಇದ್ದವು, ಯಾವ ರೀತಿ ಇದ್ದವು, ಅವುಗಳ ಬಣ್ಣ ಏನಿತ್ತು ಎಂದು ನಾನು ಪೋಲೀಸರ ಮುಂದೆ ಹೇಳಿರುವುದಿಲ್ಲ. ಮು.ಮಾ. 1 ರಿಂದ 3 ಚಾಕುಗಳನ್ನು ನನಗೆ ಪೋಲೀಸರು ತೋರಿಸಿಲ್ಲ. ಪೋಲೀಸರು ಚಾಕುಗಳ ಫೋಟೋ ಎಂದು ನಿಮಗೆ ತೋರಿಸಿದರು ಎಂಬ ಪ್ರಶ್ನೆಗೆ ಸಾಕ್ಷಿಯು ಬೆರಳೆಣಿಕೆ ಮಾಡಿ ಘಟನೆಯಾದ 7 ದಿನಗಳ ನಂತರ ತೋರಿಸಿರುತ್ತಾರೆಂದು ಹೇಳುತ್ತಾರೆ. ಸದರಿ ದಿನ ನನ್ನ ಹೇಳಿಕೆ ತೆಗೆದುಕೊಂಡಿಲ್ಲ. ಮು.ಮಾ. 1 ಮತ್ತು 2 ಕ್ಕೆ ಕೆಂಪು ಬಣ್ಣದ ಟೇಪ್ ಹಚ್ಚಿದ ಬಗ್ಗೆ ಅವು ಕರಗಸದಂತೆ ಇದ್ದ ಬಗ್ಗೆ ನನ್ನ ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ.

40. ನಾನು ಪೋಲೀಸ್ ಠಾಣೆಗೆ 24 ನೇ ತಾರೀಖು ಹೋಗಿರುತ್ತೇನೆ. ನನಗೆ ಪೋಲೀಸನವರು ಒಬ್ಬರು ಬಂದು ಕರೆದು ಹೋಗಿರುತ್ತಾರೆ. ನನ್ನ ಜೊತೆ ಪೋಲೀಸ್ ಠಾಣೆಗೆ ಇನ್ನೂ 3 ಜನ ಬಂದಿದ್ದರು. ಆ ದಿನ ರಾತ್ರಿ 08.00 ಗಂಟೆಗೆ ಹೋಗಿರುತ್ತೇವೆ. ನಾವು ಕಾಕತಿ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ನನ್ನ ಹೇಳಿಕೆಯನ್ನು ಆರಕ್ಷಕ ನಿರೀಕ್ಷಕರು ತೆಗೆದುಕೊಂಡಿರುತ್ತಾರೆ. ಆ ದಿನ ಪೋಲೀಸರು ಮಹಾಂತೇಶನಿಂದ ಅಮಾನತ್ತುಪಡಿಸಿಕೊಂಡ ಚಾಕುವಿನ ಫೋಟೋವನ್ನು ತೋರಿಸಿರುತ್ತಾರೆ. ಸದರಿ ಚಾಕುವಿಗೆ ಯಾವುದಾದರೂ ವಿಶೇಷ ಗುರುತು ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚಾಕುದ ಹ್ಯಾಂಡಲ್ ಇರಲಿಲ್ಲ ಅದು ಚೂರಿಯ ರೀತಿಯಲ್ಲಿ ಇತ್ತು ಎಂದು ಹೇಳುತ್ತಾರೆ. ಆ ರೀತಿ ಚಾಕುವಿನಿಂದ ಸಾಬೂನನ್ನು ಕತ್ತರಿಸಬುಹುದು. ಅಂತಹ ಚಾಕುಗಳು ಎಲ್ಲಾ ಅಂಗಡಿಯಲ್ಲಿ ಇರುತ್ತವೆ ಎಂದರೆ ಸರಿ. ನಾವು ಸತೀಶ ಪಾಟೀಲನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಫಾಸಾಃ 1 ಪೂಜಾ ನಮ್ಮ ಜೊತೆ ಇರಲಿಲ್ಲ. ಘಟನೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ನಾವು ಸತೀಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಪೂಜಾ ಪಾಟೀಲ, ರಾಜೇಂದ್ರ ಪಾಟೀಲ ಹಾಗೂ ಊರಿನ ಇತರ ಜನರು ಇದ್ದರು. ಪೂಜಾ ಪಾಟೀಲ ಆಗಲಿ, ರಾಜೇಂದ್ರ ಪಾಟೀಲ ಆಗಲಿ ನಮ್ಮ ಜೊತೆ ವಾಹನದಲ್ಲಿ ಆಸ್ಪತ್ರೆಗೆ ಬಂದಿರುವುದಿಲ್ಲ ನಾವು ಅವರನ್ನು ಕರೆದಿರುವುದಿಲ್ಲ. ಊರಿನಲ್ಲಿ ಘಟನೆಯಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸತೀಶ ಗಾಯಗೊಂಡು ಆಸ್ಪತ್ರೆಯಲ್ಲಿ ದಾಖಲಾಗಿದ್ದೇನೆಂದು ಗೊತ್ತಾದ ನಂತರ ನಾವು ಆಸ್ಪತ್ರೆಗೆ ಹೋಗಿರುತ್ತೇವೆ ಹೊರತು ಸತೀಶನನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಆಸ್ಪತ್ರೆಗೆ ಹೋದ

ನಂತರ ಸತೀಶ ಗಾಯಗೊಂಡು ಆಸ್ಪತ್ರೆಯಲ್ಲಿ ದಾಖಲಾಗಿರುವ ವಿಷಯವನ್ನು ಅವಳಿಗೆ ದೂರವಾಣಿ ಮುಖಾಂತರ ತಿಳಿಸಿದ ನಂತರ ಅವಳು ಸಹ ಆಸ್ಪತ್ರೆಗೆ ಬಂದಿರುತ್ತಾಳೆಂದರೆ ಸರಿಯಲ್ಲ.

41. ದಿಃ 18.06.2022 ರಂದು ರಾತ್ರಿ 08.30 ಗಂಟೆಗೆ ಲಕ್ಷ್ಮೀ ಮಂದಿರದಲ್ಲಿ ಮಹಿಳಾ ಮಂಡಳ ಸಭೆ ಪ್ರಾರಂಭವಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿ ಅರ್ನವ ಕುಟ್ರೆ ತನ್ನ ಇನೋವಾ ಕಾರನ್ನು ನನ್ನ ಅಂಗಡಿಯ ಮುಂದೆ ನಿಲ್ಲಿಸಿದನು, ಆ ಸಮಯದಲ್ಲಿ ನಾನು ಇನ್ನೂ ಅಂಗಡಿ ಚಾಲು ಇದೆ ಅಂಗಡಿಗೆ ಚಿಕ್ಕ ಮಕ್ಕಳು, ಮಹಿಳೆಯರು ಬರುತ್ತಾರೆ ಅವರಿಗೆ ಹೋಗಿ ಬರಲು ತೊಂದರೆ ಆಗುತ್ತದೆ ನನ್ನ ಅಂಗಡಿ ಮುಚ್ಚಿ ದ ನಂತರ ವಾಹನವನ್ನು ನಿಲ್ಲಿಸು ಎಂದು ಹೇಳಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿ ಅರ್ನವ ಕುಟ್ರೆ ನನ್ನ ಜೊತೆ ಜಗಳ ಮಾಡುತ್ತಿದ್ದು ಸದರಿ ಶಬ್ದ ಕೇಳಿ 1 ನೇ ಆರೋಪಿ ಆನಂದ, 5 ನೇ ಆರೋಪಿ ಶಶಿಕಲಾ, 6 ನೇ ಆರೋಪಿ ಲಕ್ಷ್ಮೀ ಸಹ ಬಂದು ಜಗಳ ಪ್ರಾರಂಭಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೂಜಾ ಪಾಟೀಲ, ನನ್ನ ಹೆಂಡತಿ ಸೋನಮ ಪಾಟೀಲ, ಸುಮನ, ಸುರೇಖಾ, ರೂಪಾ, ಲೀಲಾ ಹಾಗೂ ರಾಜೇಂದ್ರ ಪಾಟೀಲ ಮತ್ತು ಮಹಿಳಾ ಮಂಡಳ ಅಧ್ಯಕ್ಷರು ಬಂದು ನನ್ನನ್ನು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಅವರಿಗೆ ವಾಹನವನ್ನು ನಿಲ್ಲಿಸುವ ವಿಷಯದಲ್ಲಿ ಅರ್ನವ ಕುಟ್ರೆ ನನ್ನ ಜೊತೆಗೆ ಜಗಳ ಮಾಡುತ್ತಿದ್ದಾನೆಂದು ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಸಮಯದಲ್ಲಿ ಉಳಿದ ಆರೋಪಿತರು ಸ್ಥಳಕ್ಕೆ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾತ್ರಿ 09.00 ಗಂಟೆಗೆ ಮೃತ ಸತೀಶನು ಬಂದು ನನಗೆ ಜಗಳ ಏಕೆ ಆಗುತ್ತಿದೆ ಎಂದು ನನ್ನನ್ನು ವಿಚಾರಿಸಿದಾಗ ನಾನು ಜಗಳದ ಬಗ್ಗೆ ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ಆರೋಪಿತರು ಸತೀಶನದು ಬಹಳ ಆಗಿದೆ ಏನಾದರೂ ಜಗಳವಾದರೆ ನಮಗೆ ಬುದ್ದಿ ಹೇಳಲು ಬರುತ್ತಾನೆ ಅವರನ್ನು ಇವತ್ತೂ ಬಿಡುವುದು ಬೇಡ, ಏನು ಆಗುತ್ತದೆ ಅದನ್ನು ನೋಡೋಣ ಎಂದು ಹೇಳುತ್ತಾ ಉಳಿದ ಆರೋಪಿತರು 1 ನೇ ಆರೋಪಿ ಆನಂದ ಕುಟ್ರೆ ರವರನ್ನು ಪ್ರೇರೆಪಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ

ಬೇರೆ ಆರೋಪಿತರಿಂದ ಪ್ರೇರೆಪಿತನಾಗಿ 5 ನೇ ಆರೋಪಿ ಶಶಿಕಲಾ ಇವರಿಗೇ ಚಾಕು ತೆಗೆದುಕೊಂಡು ಬಾ ಎಂದು ಹೇಳಿದ್ದು, ಸದರಿಯವರು ಚಾಕು ತೆಗೆದುಕೊಂಡು ಬಂದು 1 ನೇ ಆರೋಪಿಯ ಕೈಯಲ್ಲಿ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಉಳಿದ ಆರೋಪಿತರು ಹಿಂದಿನಿಂದ ಸತೀಶನಿಗೆ ಗೆರಾವು ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಉಳಿದ ಆರೋಪಿತರು ಇವತ್ತೂ ಸತೀಶನನ್ನು ಬಿಡುವುದು ಬೇಡ ಮುಗಿಸಿ ಬಿಡೋಣ ಎಂದು ಹೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ. ಆರೋಪಿತರಾದ ಆನಂದ, ಅರ್ನವ ಮತ್ತು ದೌಲತ್ ಇವರು ಸತೀಶನನ್ನು ಕೆಳಗೆ ನೂಕಿ ಬಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ 1 ನೇ ಆರೋಪಿ ಆನಂದನು ತನ್ನ ಕೈಯಲ್ಲಿದ್ದ ಚಾಕುವಿನಿಂದ ಸತೀಶನ ಎಡಬೆನ್ನಿನ ಭಾಗದ ಮೇಲೆ ಹಲ್ಲೆ ಮಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ನಂದು ನೀಲಜಕರ ಅಲ್ಲಿ ಬಂದಿದ್ದು ಸತೀಶನ ಮೇಲೆ ಹಲ್ಲೆ ಮಾಡಬೇಡಿ ಎಂದು ಆರೋಪಿತರಿಗೆ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ಸದರಿ ನಂದು ನೀಲಜಕರ ಮೇಲೆಯೂ ಸಹ ಆರೋಪಿತರು ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಆರೋಪಿ ಜಾಯಪ್ಪಾ ಚಾಕುವನ್ನು ತೆಗೆದುಕೊಂಡು ಬಂದು ಸತೀಶನ ಹೊಟ್ಟೆಯ ಬಲಭಾಗದ ಎದೆಯ ಕೆಳಗಿನ ಪಕ್ಕಡೆಯ ಹತ್ತಿರ ಚಾಕುವಿನಿಂದ ಹಲ್ಲೆ ಮಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರ 4 ನೇ ಆರೋಪಿ ಮಹಾಂತೇಶ ತನ್ನ ಜೊತೆ ತಂದ ಚಾಕುವಿನಿಂದ ಸತೀಶನ ಮೇಲೆ ಹಲ್ಲೆ ಮಾಡಲು ಹೋಗಿದ್ದು ನನ್ನ ಹೆಂಡತಿ ಸೋನಮ ಪಾಟೀಲ ಅವನನ್ನು ನುಕಿದಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೂಜಾ ಪಾಟೀಲ ತನ್ನ ಗಂಡನನ್ನು ಉಳಿಸಲು ಬರುತ್ತಿದ್ದಾಗ ಆರೋಪಿತರಾದ ಸುರೇಖಾ ಮತ್ತು ಸಂಜನಾ ಪೂಜಾ ಪಾಟೀಲ ಇವಳ ಕೂದಲು ಹಿಡಿದು ಕೆಳಗೆ ಬೀಳಿಸಿ ಅವಳನ್ನು ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವಳನ್ನು ರಕ್ಷಿಸಲು ಬಂದ ಚಾಸಾಃ 17 ರಾಜೇಂದ್ರ ಪಾಟೀಲ ಇವರನ್ನು ಸಹ ಆರೋಪಿತರಾದ ಪರಶುರಾಮ ಮತ್ತು ವಸಂತ ಪಾಟೀಲ ಕೆಳಗೆ ಬೀಳಿಸಿ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿಯವರಿಗೂ ಗಾಯವಾದವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆಗ ಉಮೇಶನಿಗೆ ಮಹೇಶ ಪಿಂಗಟ ಇವರ ವಾಹನವನ್ನು ತೆಗೆದುಕೊಂಡು ಬರಲು ಹೇಳಿದ್ದು, ಸದರಿಯವರು ವಾಹನ ತೆಗೆದುಕೊಂಡು

ಬಂದ ಮೇಲೆ ಸತೀಶನನ್ನು ಸದರಿ ವಾಹನದಲ್ಲಿ ಕೂರಿಸಿ ನಾನು, ಸೋನಮ ಪಾಟೀಲ ಹಾಗೂ ಉಮೇಶ ಪಾಟೀಲ ಕೆ.ಎಲ್.ಇ. ಆಸ್ಪತ್ರೆಗೆ ಕರೆದುಕೊಂಡು ಹೋದೇವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರ ನಂದುನನ್ನು ಅವರ ಹೆಂಡತಿ ಜ್ಯೋತಿ ಅವರನ್ನು ಕೆ.ಎಲ್.ಇ. ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

42. ಆರೋಪಿತರು ಸತೀಶ ಪಾಟೀಲನ ಮೇಲೆ ಸಿಟ್ಟಾಗಿ ಅವನ ವಿರುದ್ಧ ಹಗೆ ಸಾದಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಘಟನೆ ಆಗಿದೆ ಎಂದು ಹೇಳುವ ಸ್ಥಳದಲ್ಲಿ ವಿದ್ಯುತ್ ಕಂಬ ಇದ್ದು, ಸದರಿ ಆರೋಪಿತರನ್ನು ವಿದ್ಯುತ್ ಕಂಬದ ಬೆಳಕಿನಲ್ಲಿ ನೋಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸತೀಶ ನನ್ನ ಸಂಬಂಧಿಕನಾದ ಕಾರಣ ಪ್ರಾಜಾಳಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 6, 9, 13 ಮತ್ತು 14 ನೇ ಆರೋಪಿತರ ಪರ ಶ್ರೀ. ಪಿ.ಎ.ಕೆ. ವಕೀಲರಿಂದಃ**

43. ನನ್ನ ಹೆಂಡತಿ ಪ್ರಾಸಾಃ 2 ಸೋನಮ ಯಾದೋ ಪಾಟೀಲ ಬೈರವನಾಥ ಮಹಿಳಾ ಮಂಡಳದ ಉಪಾಧ್ಯಕ್ಷ ಇದ್ದಳು ಎಂದರೆ ಸರಿ. ನಮ್ಮ ಅಂಗಡಿಗೆ ಎರಡು ಬಾಗಿಲುಗಳು ಇವೆ ಎಂದರೆ ಸಾಕ್ಷಿಯು ಮೂರು ಬಾಗಿಲುಗಳು ಇವೆ ಎಂದು ಹೇಳುತ್ತಾರೆ. ಒಂದು ಬೈರವನಾಥ ಮಂದಿರಕ್ಕೆ ಮುಖ ಮಾಡಿದ್ದು, ಇನ್ನೊಂದು ಸತೀಶ ರಾಜೇಂದ್ರ ಪಾಟೀಲ ರವರ ಮನೆಗೆ ಮುಖ ಮಾಡಿ ಇರುತ್ತದೆ ಎಂದರೆ ಸರಿ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳು ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ನನ್ನ ಅಂಗಡಿಯ ಯಾವ ಬಾಗಿಲ ಮುಂದೆ ವಾಹನ ನಿಲ್ಲಿಸಲು 2 ನೇ ಆರೋಪಿ ಅರ್ನವ ಕುಟ್ರೆ ಬಂದಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಪೂರ್ವದ ಬಾಗಿಲಿಗೆ ನಿಲ್ಲಿಸಲು ಬಂದಿದ್ದನೋ ಮತ್ತು ದಕ್ಷಿಣದ ಬಾಗಿಲಿಗೆ ನಿಲ್ಲಿಸಲು ಬಂದಿದ್ದನೋ ಎಂದು ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳು ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು

ಪೂರ್ವ ದಿಕ್ಕಿಗೆ ಮುಖ ಮಾಡಿ ಹಚ್ಚುತ್ತಿದ್ದನೋ ಅಥವಾ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಹಚ್ಚುತ್ತಿದ್ದನೋ ಎಂದು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳು ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯ ಸಮಯದಲ್ಲಿ ನಾನು ಅಂಗಡಿಯ ಒಳಗೆ ಇದ್ದೆನೋ ಅಥವಾ ಅಂಗಡಿಯ ಹೊರಗೆ ಇದ್ದೆನೋ ಎಂದು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳು ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳು ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ  ವಾಹನ, ಬೈರವನಾಥ ದೇವಸ್ಥಾನದ ಪಕ್ಕದ ರಸ್ತೆಯಿಂದ ಬಂತೋ, ಊರಿನ ಹೊರಿಗಿನಿಂದ ಬಂತೋ ಅಥವಾ ಊರಿನ ಒಳಗಿನಿಂದ ಬಂತೋ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಅದು ಹೇಳುವುದು ಇನ್ನೂ ಬಾಕಿ ಇದ್ದು ಸದರಿ ವಾಹನ ಬೈರವನಾಥ ದೇವಸ್ಥಾನದ ಪಕ್ಕದ ರಸ್ತೆಯಿಂದ ಬಂತು ಎಂದು ಹೇಳುತ್ತಾರೆ. ಈ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆಂದರೆ ಸರಿ. ಸದರಿ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾಹನದ ಸಂಖ್ಯೆಯನ್ನಾಗಲಿ, ವಾಹನದ ಬಣ್ಣವನ್ನಾಗಲಿ ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಈ ಘಟನೆಯಾಗಿದೆ ಎಂದು ಹೇಳುವ ಸಂದರ್ಭದಲ್ಲಿ ದೇವಸ್ಥಾನದ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಮಾತುಕತೆ ಆಗಿರುವುದಿಲ್ಲ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ನಾನು ಎಲ್ಲಿ ನಿಂತಿದ್ದೆ, ಸೋನಮ ಪಾಟೀಲ ಎಲ್ಲಿ ನಿಂತಿದ್ದಳು, ಪೂಜಾ ಪಾಟೀಲ ಎಲ್ಲಿ ನಿಂತಿದ್ದಳು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು

ಘಟನೆಯಾಗುವ ಸಂದರ್ಭದಲ್ಲಿ ಕಾಕತಿ ಪೋಲೀಸರಿಗೆ ದೂರವಾಣಿ ಕರೆ ಅಥವಾ ಸಂಖ್ಯೆ 100 ಕ್ಕೆ ಕರೆ ಮಾಡಿರುವುದಿಲ್ಲ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಘಟನೆ ನಡೆದ ಸ್ಥಳದಲ್ಲಿ ಬೆಳಕು ಇತ್ತು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಬೆಳಕು ಎಲ್ಲಿಂದ ಬರುತ್ತಿತ್ತು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಸತೀಶ ಪಾಟೀಲನನ್ನು ವಾಹನದಲ್ಲಿ ಕೆಳಗೆ ಮಲಗಿಸಿದ್ದೇವೋ, ಸೀಟ ಮೇಲೆ ಮಲಗಿಸಿದ್ದೆವೋ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಕೇಳಿರುವುದಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ಹೇಳುತ್ತಾರೆ. ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಸತೀಶ ಪಾಟೀಲನಲ್ಲಿ ಹಿಂದಿನ ಸಿಟಿನಲ್ಲಿ ಮಲಗಿಸಿರುವುದನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಾನನಲ್ಲಿ ರಕ್ತ ಬಿದ್ದಿತ್ತು. ಸದರಿ ವ್ಯಾನನ್ನು ನಾನು ಇಲ್ಲಿಯವರೆಗೂ ಯಾವತ್ತೂ ಪೋಲೀಸರಿಗೆ ತೋರಿಸಿರುವುದಿಲ್ಲ. ಇಂದಿನವರೆಗೂ ಸದರಿ ವ್ಯಾನ್ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ಮಹೇಶ ಪಿಂಗಟ ರವರ ವಾಹನವಾಗಿದ್ದು ಅವರೇ ತೆಗೆದುಕೊಂಡು ಹೋಗಿರುತ್ತಾರೆಂದು ಹೇಳುತ್ತಾರೆ. ಈ ವಿಷಯವನ್ನು ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಂದೆ ಮಹೇಶ ಪಿಂಗಟ ರವರ ಹೇಳಿಕೆಯನ್ನು ಪೋಲೀಸರು ತೆಗೆದುಕೊಂಡಿರುತ್ತಾರೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವ್ಯಾನ್ ನ ಬಣ್ಣವಾಗಲಿ, ನೊಂದಣಿ ಸಂಖ್ಯೆಯಾಗಲಿ ನಾನು ಪೋಲೀಸರ ಮುಂದೆಯಾಗಲಿ, ನ್ಯಾಯಿಕ ದಂಡಾಧಿಕಾರಿಗಳ ಮುಂದೆ

ಕಲಂ 164 ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

44. 30 ವರ್ಷ ನೀವು ಸೈನ್ಯದಲ್ಲಿ ಸೇವೆ ಸಲ್ಲಿಸಿದ ಕಾರಣ ಘಟನಾ ಸ್ಥಳದಲ್ಲಿ ಸತೀಶ ಪಾಟೀಲರನ್ನು ಉಳಿಸಿಕೊಳ್ಳಲು ನಿವೇನಾದರೂ ಪ್ರಯತ್ನಿಸಿದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಘಟನೆ ಇಷ್ಟು ವೇಗವಾಗಿ ನಡೆಯಿತು ಎಂದರೆ ನನಗೆ ಅವರನ್ನು ಉಳಿಸಿಕೊಳ್ಳಲು ಆಗಲಿಲ್ಲ ಎಂದು ಹೇಳುತ್ತಾರೆ. ದಿಃ 19.06.2018 ರಂದು ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ಕೆ.ಎಲ್.ಇ. ಆಸ್ಪತ್ರೆಯಲ್ಲಿ ಕೊಟ್ಟಿರುತ್ತೇನೆ. ಸದರಿ ಹೇಳಿಕೆ ಕೊಡುವಾಗ ನೀವು ಪೋಲೀಸರಿಗೆ ಚಾಕುವನ್ನು ತೋರಿಸಿದರೆ ನಾನು ಗುರುತಿಸುತ್ತೇನೆಂದು ಹೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೋಲೀಸರು ನನ್ನನ್ನು ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ಹೇಳುತ್ತಾರೆ. ಪೋಲೀಸರು ಹೇಗೆ ಕೇಳಿದರೋ ಹಾಗೆ ನಾನು ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನೀವಾಗಿಯೇ ಪೋಲೀಸರಿಗೆ ಚಾಕುಗಳ ಬಗ್ಗೆ ಹೇಳಲು ನಿಮಗೇನಾದರೂ ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನನ್ನು ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ಹೇಳುತ್ತಾರೆ. ಈ ವಿಷಯವನ್ನು ನಾನು ನ್ಯಾಯಾಧೀಶರ ಮುಂದೆ ಹೇಳಿದ ಹೇಳಿಕೆಯಲ್ಲೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಂಜೆ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲನ್ನು ನಾಳೆಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.